## ಪಾಸಿಟಿವ್ ಆದ್ರೆ...

ಮನೆಯಲ್ಲಿ ನಾನು ನನ್ನ ಹೆಂಡತಿ ಮಾತನಾಡುತ್ತಾ ಕುಳಿತಿದ್ದೆವು. 'ನೋಡು, ನೀನು ಸಣ್ಣ ಸಣ್ಣ ವಿಚಾರಗಳಿಗೆಲ್ಲಾ ತಲೆ ಕೆಡಿಸಿಕೊಳ್ಳಬೇಡ, ಯಾವಾಗಲೂ ಪಾಸಿಟಿವ್ ಆಗಿರಬೇಕು' ಎಂದು ಹೇಳುತ್ತಿದ್ದೆ. ಅಷ್ಟರಲ್ಲಿ ರೂಮಿನಲ್ಲಿ ಆಟ ಆಡುತ್ತಿದ್ದ ಐದಾರು ವರ್ಷದ ನಮ್ಮ ಮೊಮ್ಮಗಳು ಓಡಿ ಬಂದು, 'ಅಜ್ಜಾ, ಆ ತರಹ ಎಲ್ಲಾ ಹೇಳಬಾರದು, ಈಗ ಪಾಸಿಟಿವ್ ಅಲ್ಲಾ, ನೆಗೆಟಿವ್ ಆಗಿದ್ರೆ ಒಳ್ಳೇದು. ಪಾಸಿಟಿವ್ ಆದರೆ ಕೊರೊನಾ ಬರುತ್ತೆ, ತಿಳ್ಕೋ. ಇನ್ನೊಂದು ಸಲ ಯಾರಿಗೂ ಪಾಸಿಟಿವ್ ಅಂತ ಹೇಳಲೇ ಬೇಡ, ಗೊತ್ತಾಯ್ತಾ?' ಅಂತ ಬುದ್ಧಿಹೇಳಿ ಮತ್ತೆ ತನ್ನ ಆಟ ಮುಂದುವರಿಸಲು ತನ್ನ ರೂಮಿಗೆ ಓಡಿ ಹೋದಳು.

**ವೈ.ಎಸ್. ನಾಗರಾಜ**





## 'ಆನಿ'

ನಾನಾಗ ತುಂಗಭದ್ರಾ ಗ್ರಾಮೀಣ ಬ್ಯಾಂಕಿನಲ್ಲಿ (ಈಗಿನ ಕರ್ನಾಟಕ ಗ್ರಾಮೀಣ ಬ್ಯಾಂಕ್) ಕೆಲಸ ಮಾಡುತ್ತಿದ್ದೆ. ಬಳ್ಳಾರಿ ಜಿಲ್ಲೆಯವನಾದ ನಾನು ಉದ್ಯೋಗ ಮಾಡುತ್ತಿದ್ದುದು ಬ್ಯಾಂಕಿನ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹಳ್ಳಿಯೊಂದರ ಶಾಖೆಯಲ್ಲಿ. ಬ್ಯಾಂಕಿನಲ್ಲಿ ನಾವು ಮೂವರು ಸಹೋದ್ಯೋಗಿಗಳು ಒಂದೇ ಸಾಲಿನಲ್ಲಿ ಕುಳಿತುಕೊಂಡಿದ್ದೆವು. ಆಗ ನಮ್ಮ ಮ್ಯಾನೇಜರ್ ಜೊತೆಗೆ ಮಾತನಾಡುತ್ತಿದ್ದ ಗ್ರಾಹಕರೊಬ್ಬರು 'ಆನಿ', 'ಆನಿ' ಎಂದು ಚೀರಿದಂತೆ ಕೇಳಿತು. ಆ ಕಡೆ ಓಡಿ ಹೋಗಿ ನೋಡಿದರೆ ಅಲ್ಲಿ ಏನೂ ಕಾಣಲಿಲ್ಲ. ಮತ್ತೆ ಒಳಗೆ ಬಂದು ಕುಳಿತೆ. ಸಹೋದ್ಯೋಗಿ ಮಿತ್ರರು, 'ಯಾಕೆ ಓಡಿ ಹೋಗಿ ನೋಡಿದಿರಿ?' ಎಂದರು. 'ಏನಿಲ್ಲಾ, ಆ ಮನುಷ್ಯ ಆನಿ ಆನಿ... ಎಂದು ಚೀರಿದಂತಾಯ್ತು. ಆನೆ ಬಂತೇನೋ ಎಂದು ಓಡಿ ಹೋಗಿದ್ದೆ' ಎಂದಾಗ ಎಲ್ಲರೂ ನಕ್ಕಿದ್ದೇ ನಕ್ಕಿದ್ದು. ರಾಯಚೂರು ಜಿಲ್ಲೆಯಲ್ಲಿ 'ಏನು?' ಎನ್ನಲು 'ಆನಿ?', 'ಆನೆಪ್ಪಾ?', 'ಆನೆವ್ವಾ?' ಎನ್ನುತ್ತಾರಂತೆ. ಆ ವ್ಯಕ್ತಿಯ ದಪ್ಪ ದನಿಯಲ್ಲಿ 'ಆನಿ' ಎಂಬ ಪದ ಕೇಳಿ ಆನೆಯೇ ಬಂತೆಂದು ಭಾವಿಸಿದ್ದೆ.

**ಪ್ರಕಾಶ್ ಮಲ್ಕಿಒಡೆಯರ್**